"ಯಲ್ಲಮ್ಮನ ಕತೀ ಮೋಡಿನೇ ಅದು. ನಾ ಹೇಳ್ವಾಗ ಈ ಜನ ನನ್ನ ಯಲ್ಲಮ್ಮನಿಗಾಗಿ ಅಳ್ತಾರ. ಅವ್ರು ಕತಿ ಹೇಳ್ವಾಗ ಅವ್ರ ಯಲ್ಲಮ್ಮನ್ಗ ನಾ ಅಳ್ತಿನಿ. ಇದೇ ಇದ್ರ ಸೌಂದರ್ಯ ಆದ...

ನೋಡ್ತಾ ನಾಟ್ಕ ನೋಡಕ್ಕ ಕುಂತವ್ರೆಲ್ಲ ಅಳ್ತಾರ, ಇನ್ನೊಬ್ಬ ರೇಣುಕಾ ಹುಟ್ಟಬಾರ್ದು, ಅದಕ್ಕೇ ಆಕಿ ದೇವಿಯಾದಳು ಅನ್ನೋ ಭಾವ ಬರ್ತದ. ಇದು ಹೆಚ್ಚುಕಡಿಮೆ ಯೇಸುಕ್ರಿಸ್ತನ ತರ... ರೇಣುಕಾ ನಮಗೋಸ್ಕರ ಪ್ರಾಣ ತೆತ್ತಳು. ಹಾಗಾಗಿ ಅವಳು ಪಟ್ಟ ಪಾಡು ಯಾರೂ ಪಡಬಾರ್ದು ಅನ್ನೋ ಹಾಂಗ.

ಈ ಹಿನ್ನೆಲೆ ಒಳ್ಗ, ಯಲ್ಲಮ್ಮನ್ನ ನಾನು ರಿಚುವಲ್‌ಗಳ ಮೂಲಕ ಪೂಜೆ ಮಾಡ್ಕೊತ ಬಂದಿಲ್ಲ. ಆದ್ರ ಕಲೆ ದೇವಿಯಾಗಿ, ಕಲೆಯ ತಾಯಿಆಗಿ ಅವಳು ನಾನು ಏನನ್ನ ಹೇಳಾಕೆ ಆಗಿರಲಿಲ್ಲೋ ಅದನ್ನ ಹೇಳಾಕೆ ದಾರಿ ತೋರಿಸ್ಯಾಳ. ರಂಗಭೂಮಿನಾಗ ಒಬ್ಬ ನಟ/ನಟಿ ಏನು ಸಂಭಾಷಣೆ ಹೇಳ್ತಾರ? ನಿರ್ದೇಶಕರು ಏನು ಕೊಡ್ತಾರೋ ಅದ್ನ ಹೇಳ್ತಾರ. ಆದ್ರ ಈ ಯಲ್ಲಮ್ಮನ ಮ್ಯಾನುಸ್ಕ್ರಿಪ್ಟು ತಲೆತಲಾಂತರದಿಂದ ಬಂದದ. ಬೇರೆ ಬೇರೆ ಸಮುದಾಯಗಳು ಇದೇ ಕತೀನ ಹೇಳ್ತಾ ಬಂದವ. ಪ್ರತಿಯೊಂದು ಕತೀನೂ ಅವರವರೇ ಹೊಲೆದ ಕತಿ ಅದ. ಒಂದೊಂದು ಮನೀಗ ಒಂದೊಂದು ಕತಿ ಅದ. ಹಾಗಾಗಿ ಇಲ್ಲೀತನ ಯಾರೂ ನನಗ 'ನೀನು ಕತೀನ ತಪ್ಪು ಹೇಳಿದ್ಯ' ಅಂತ ಹೇಳಿಲ್ಲ. ಯಾವಾಗ್ಲು ಅವ್ರು ಹೇಳಾದು ಒಂದೇ, 'ನಾವೂ ಯಲ್ಲಮ್ಮನ ಕತಿ ಹೇಳ್ತಿವ್ರಿ, ಆದ್ರ ನಮ್ ಕತಿ ಸ್ವಲ್ಪ ಬೇರೆ ಅದ' ಅಂತ. ಎಲ್ಲಾನು ಒಳಗೊಳ್ಳೊ ಈ ಗುಣ ನೋಡಿ ಹ್ಯಂಗದ... ಯಲ್ಲಮ್ಮನ ಕತೀ ಮೋಡಿನೇ ಅದು. ನಾ ಹೇಳ್ವಾಗ ಈ ಜನ ನನ್ನ ಯಲ್ಲಮ್ಮನಿಗಾಗಿ ಅಳ್ತಾರ. ಅವ್ರು ಕತಿ ಹೇಳ್ವಾಗ ಅವ್ರ ಯಲ್ಲಮ್ಮನ್ಗ ನಾ

